# 10

# ನೀನು ಸಹಾಯವಾಗಿರುವೆಯಾ ಅಥವಾ ಅಡಚಣೆಯಾಗಿರುವೆಯಾ?

ಕ್ರೈಸ್ತರಲ್ಲಿ ಎರಡು ವಿಧಗಳು: ಸಭೆಗೆ ಸಹಾಯಿಸುವವರು ಹಾಗೂ ಅಡಚಣೆ ಉಂಟು ಮಾಡುವವರು. ಇವೆರಡರಲ್ಲಿ ನೀವುಗಳು ಯಾವ ಗುಂಪಿಗೆ ಸೇರಿರುವಿರಿ? 3 ಯೋಹಾನದಲ್ಲಿ ಈ ಎರಡು ಗುಂಪಿನವರು ಸೇರಿದ್ದಾರೆ.

ಈ ಪತ್ರಿಕೆಯು ರೋಮಾಪುರ ಹಾಗೂ ಎಫೆಸ ಪತ್ರಿಕೆಯಂತೆ ಇರದೆ, ದೈವ ಶಾಸ್ತ್ರಕ್ಕೆ ಸಂಬಂಧವಿರುವ ಯೇಸು ಮತ್ತು ಕ್ರಿಸ್ತನು ಎಂಬ ಪದಗಳಿರದಿದ್ದರೂ, ಯೇಸು ಎಂಬ ಹೆಸರಿಗೆ ಸಂಬಂಧ ಪಡುವ ಪತ್ರಿಕೆಯಾಗಿದೆ. ಯಾವಾತಾನಿಗೆ ಸಕಲ ಮೊಣಕಾಲುಗಳು ಅಡ್ಡ ಬೀಳುತ್ತವೋ, ಆ ಹೆಸರಿನಿಂದಲೇ ಸಕಲರಿಗೆ ರಕ್ಷಣೆಯು ದೊರೆಯುತ್ತದೆ (ಅಪೊಸ್ತರ ಕೃತ್ಯಗಳು 4:12; ಫಿಲಿಪ್ಪಿ 2:9, 10).

ಒಬ್ಬನ ಹೃದಯದಿಂದ ಮತ್ತೊಬ್ಬನ ಹೃದಯಕ್ಕೆ ಬರೆದ ವೈಯಕ್ತಿಕ ಪತ್ರಿಕೆಯಾಗಿದೆ.[1] ಬರೆದವನಿಗೂ, ಬರೆಯಿಸಿಕೊಂಡವನ ನಡುವೆ ವಿಶೇಷವಾದ ಭರವಸೆಯನ್ನು ನೀಡಿರುತ್ತದೆ. ಮೊದಲ ಶತಮಾನದ ಅಂತ್ಯದಲ್ಲಿ ಸಭೆಯಲ್ಲಿ ಇದ್ದ ಇತರರ ಕುರಿತಾದ ವಿಚಾರವು ಸಹ ಇದರಲ್ಲಿ ಅಡಕವಾಗಿದೆ.[2] ಯೋಹಾನನು ಹೆಸರಿಸಿರುವ ಇತರ ವ್ಯಕ್ತಿಗಳ ಕುರಿತು ಗಮನಿಸೋಣ.

ಖಂಡಿತವಾಗಿಯೂ ನಾವು ಮೊದಲಿನಿಂದಲೂ 3ನೇ ಯೋಹಾನ ಪತ್ರಿಕೆಯನ್ನು ಓದಬೇಕು:

> ಸಭೆಯ ಹಿರಿಯನು ತಾನು ಸತ್ಯವಾಗಿ ಪ್ರೀತಿಸುವ ಪ್ರಿಯ ಗಾಯನಿಗೆ ಬರೆಯುವದೇನಂದರೆ-ಪ್ರಿಯನೇ, ನೀನು ಆತ್ಮವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ಸಹೋದರರು ಆಗಾಗ್ಗೆ ನನ್ನ ಬಳಿಗೆ ಬಂದು ನಿನ್ನಲ್ಲಿರುವ ಸತ್ಯವನ್ನು ಕುರಿತು ತಿಳಿಸಿ ನೀನು ಸತ್ಯವಂತನಾಗಿ ನಡೆಯುವವನು ಎಂದು ಹೇಳುವಾಗ ನಾನು ಬಹಳ ಸಂತೋಷಪಡುತ್ತೇನೆ. ನನ್ನ ಮಕ್ಕಳು ಸತ್ಯವನ್ನನುಸರಿಸಿ ನಡೆಯುವವರಾ ಗಿದ್ದಾರೆಂದು ಕೇಳುವದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ.
>
> ಪ್ರಿಯನೇ, ಪರಿಚಯವಿಲ್ಲದವರಾದ ಸಹೋದರರಿಗೂ ನೀನು ಸತ್ಕಾರವನ್ನು ಮಾಡುವದರಲ್ಲಿ ನಂಬುವವನಿಗೆ ಯೋಗ್ಯನಾಗಿ ನಡೆಯುತ್ತೀ. ಅವರು ಸಭೆಯ ಮುಂದೆ ನಿನ್ನ ಪ್ರೀತಿಗೆ ಸಾಕ್ಷಿ ಹೇಳಿದರು. ಅವರನ್ನು ನೀನು ದೇವರ ಸೇವಕರಿಗೆ ಯೋಗ್ಯವಾದ ರೀತಿಯಿಂದ ಸಾಗ ಕಳುಹಿಸಿದರೆ ಚೆನ್ನಾಗಿರುವದು. ಯಾಕಂದರೆ ಅವರು ಕ್ರಿಸ್ತನ ಹೆಸರನ್ನು ಪ್ರಸಿದ್ಧಿಪಡಿಸುವದಕ್ಕೋಸ್ಕರ ಹೊರಟುಹೋಗಿದ್ದಾರೆ ಮತ್ತು ಅನ್ಯಜನಗಳಿಂದ ಏನೂ ತೆಗೆದುಕೊಳ್ಳುವವರಲ್ಲ. ಅದದರಿಂದ ನಾವು ಸತ್ಯಕ್ಕೆ ಸಹಕಾರಿಗಳಾಗುವಂತೆ ಅಂಥವರನ್ನು ಸೇರಿಸಿಕೊಳ್ಳವ ಹಂಗಿನಲ್ಲಿದ್ದೇವೆ.
>
> ಸಭೆಗೆ ಕೆಲವು ಮಾತುಗಳನ್ನು ಬರೆದಿದ್ದೆನು; ಆದರೆ ಸಭೆಯವರಲ್ಲಿ ಪ್ರಮುಖನಾಗಬೇಕೆಂದಿರುವ ದಿಯೊತ್ರೇಫನು ನಮ್ಮ ಮಾತನ್ನು ಅಂಗೀಕರಿಸುವದಿಲ್ಲ. ಆದಕಾರಣ ನಾನು ಬಂದರೆ ಅವನು ಮಾಡುವ ಕೃತ್ಯಗಳ ವಿಷಯದಲ್ಲಿ ಎಲ್ಲರಿಗೂ ನೆನಪುಕೊಡುವೆನು. ಅವನು ಹರಟೆಕೊಚ್ಚುವವನಾಗಿ ನಮ್ಮ ವಿಷಯದಲ್ಲಿ ಕೆಟ್ಟಕೆಟ್ಟ

ಮಾತುಗಳನ್ನಾಡುತ್ತಾನೆ. ಇವೂ ಸಾಲದೆ ತಾನು ಸಹೋದರರನ್ನು ಸೇರಿಸಿಕೊಳ್ಳಬೇಕೆಂದಿರುವರಿಗೆ ಅಡ್ಡಿ ಮಾಡಿ ಅವರನ್ನು ಸಭೆಯೊಳಗಿಂದ ಬಹಿಷ್ಕರಿಸುತ್ತಾನೆ.

ಪ್ರಿಯನೇ, ನೀನು ಕೆಟ್ಟ ನಡತೆಯನ್ನು ಅನುಸರಿಸದೆ ಒಳ್ಳೇ ನಡತೆಯನ್ನು ಅನುಸರಿಸು; ಒಳ್ಳೇದನ್ನು ಮಾಡುವವನು ದೇವರಿಂದ ಹುಟ್ಟಿದವನಾಗಿದ್ದಾನೆ. ಕೆಟ್ಟದ್ದನ್ನು ಮಾಡುವವನು ದೇವರನ್ನು ಕಂಡವನಲ್ಲ. ದೇಮೇತ್ರಿಯನು ಸಂಭಾವಿತನೆಂದು ಎಲ್ಲರಿಂದಲೂ ಸಾಕ್ಷಾತ್ ಸತ್ಯದಿಂದಲೂ ಸಾಕ್ಷಿಹೊಂದಿದ್ದಾನೆ. ನಾವು ಸಹ ಅವನ ವಿಷಯದಲ್ಲಿ ಸಾಕ್ಷಿ ಹೇಳು ವವರಾಗಿದ್ದೇವೆ; ನಮ್ಮ ಸಾಕ್ಷಿ ಸತ್ಯವಾದದ್ದೆಂದು ನೀನು ಬಲ್ಲೆ.

ನಿನಗೆ ಬರೆಯತಕ್ಕ ಅನೇಕ ಸಂಗತಿಗಳಿದ್ದವು, ಆದರೆ ಮಸಿ ಲೇಖಣಿಗಳನ್ನು ತೆಗೆದುಕೊಂಡು ಬರೆಯುವದಕ್ಕೆ ನನಗಿಷ್ಟವಿಲ್ಲ. ಬೇಗನೆ ನಿನ್ನನ್ನು ನೋಡು ವೆನೆಂದು ನಿರೀಕ್ಷಿಸುತ್ತೇನೆ; ಆಗ ಮುಖಾಮುಖಿಯಾಗಿ ಮಾತಾಡುವೆವು.

ನಿನಗೆ ಶಾಂತಿ ಇರಲಿ. ಸ್ನೇಹಿತರು ನಿನಗೆ ವಂದನೆ ಹೇಳುತ್ತಾರೆ. ಸ್ನೇಹಿತರನ್ನು ಹೆಸರೆಸರಾಗಿ ವಂದಿಸು.

ಇಬ್ಬರು ವ್ಯಕ್ತಿಗಳಿಗಾಗಿ ತಯಾರಿಸಲ್ಪಟ್ಟ ಬೈಸಿಕಲ್ ("ಇಬ್ಬರು ವ್ಯಕ್ತಿಗಳಿಗಾಗಿ ಬೈಸಿಕಲ್") ಪ್ರಯಾಣ ಮಾಡುವವರು ಎತ್ತರದ ಸ್ಥಳಕ್ಕೆ ಹೋದ ಅನುಭವವಾಗಿದೆ. ಎತ್ತರದ ಸ್ಥಳವನ್ನು ತಲುಪಿದ ಆಯಾಸಗೊಂಡವರಲ್ಲಿ ಒಬ್ಬನು, ನಾವು ಈ ಸ್ಥಳವನ್ನು ತಲುಪುತ್ತೇವೆಂಬುದು ಸಂಶಯವಾಗಿತ್ತು ಎಂದು ಹೇಳಿದಾಗ, ಮತ್ತೊಬ್ಬನು, ಹೌದು ನಾನು ಬ್ರೇಕನ್ನು ಒತ್ತಿ ಹಿಡಿಯದೆ ಹೋಗಿದ್ದರೆ, ನಾವು ಇಳಿಜಾರಿಗೆ ಬಿದ್ದು ಹೋಗುತ್ತಿದ್ದೆವು ಎಂದು ಹೇಳಿದ ಹಾಗೆ.

ಪ್ರತಿ ಸಭೆಯಲ್ಲೂ ಸಹಾಯಕರು ಇರುತ್ತಾರೆ. (ಎತ್ತರದ ಸ್ಥಳಕ್ಕೆ ಏರುವವರು) ಹಾಗೂ ಬ್ರೇಕನ್ನು ಒತ್ತಿ ಹಿಡಿಯುವವರು ಈ ಎರಡು ವಿಧವಾದ ಜನರ ಕುರಿತು 3 ನೇ ಯೋಹಾನ ಪತ್ರಿಕೆಯಲ್ಲಿ ಗಮನಿಸೋಣ.

## ಸಭೆಯ ಕಾರ್ಯಗಳಲ್ಲಿ
## ಕ್ರೈಸ್ತರು ಸಹಕರಿಸಿದರು

ಕರ್ತನ ಕಾರ್ಯವನ್ನು ಸಂಪೂರ್ಣಗೊಳಿಸುವದಕ್ಕಾಗಿ ನಾನಾ ವಿಧವಾದ ಕ್ರೈಸ್ತರು ಸಹಕರಿಸಿದ್ದುದ್ದನ್ನು ಯೋಹಾನ ಪತ್ರಿಕೆ ಹೇಳುತ್ತದೆ.

### ಸಭೆ ವೃದ್ಧಿಗಾಗಿ ಶ್ರಮಿಸುವವರು

ಕರ್ತನ ಕಾರ್ಯದ ಸಾಧನೆಗಾಗಿ ಶ್ರಮಿಸುವವರ ಕುರಿತು ಈ ಪತ್ರಿಕೆಯು ತಿಳಿಸುತ್ತದೆ (3 ಯೋಹಾನ 1). ಅಪೊಸ್ತಲನಾದ ಯೋಹಾನನೇ ಇದನ್ನು ಬರೆದಿರುವದು ದೃಢ ಪಟ್ಟಿದೆ. ಈ ಅಪೊಸ್ತಲನು ಮೊದಲ ಕ್ರೈಸ್ತನು ಎಂದು ತಿಳಿದು ಬಂದಿದೆ. ಹಾಗೂ ಕ್ರಿಸ್ತನಲ್ಲಿದ್ದ ಒಬ್ಬ ಸಹೋದರನಿಗೆ ಬರೆದಿರುವನು. ಸಭೆಯ ಕಾರ್ಯಗಳನ್ನು ಸಾಧಿಸಲು ಪ್ರೀತಿ ಇರುವ ನಾಯಕರುಗಳ ಅಗತ್ಯವಿದೆ ಎಂದು ತಿಳಿದು ಬರುತ್ತದೆ.

ಈ ಕೆಲಸಕ್ಕೆ ಅವನು ಯಾವ ಸಂಬಂಧವನ್ನು ಹೊಂದಿದ್ದನು? ಮೊದಲು ಈ ಕೆಲಸವೇನು ಎಂದು ಅರಿಯಬೇಕು. ಸುವಾರ್ತಿಕರು ಹಾಗೂ ಪ್ರಯಾಣ ಮಾಡುತ್ತಿದ್ದ ದೇವ ಸೇವಕರ ಕುರಿತು ಯೋಹಾನನು ಚಿಂತಿತನಾಗಿದ್ದನು. ದೇವರ ಕಾರ್ಯ ಸಾಧನೆ ಮಾಡಬೇಕಿದ್ದರೆ, ಸಭೆಗಳು ಅವರಿಗೆ ಸಹಾಯಿಸಬೇಕು.[3] 3ನೇ ಯೋಹಾನದಲ್ಲಿ ಗಾಯನು ಸಹಕರಿಸುತ್ತಿದ್ದರೆ, ದಿಯೋತ್ರೇಫನು ಅಡ್ಡವಾಗಿದ್ದನು. ಯೋಹಾನನು ನಾಯಕನಾಗಿದ್ದರಿಂದ ಈ ಪರಿಸ್ಥಿತಿಯನ್ನು ಹೇಗೆ ನಿಬಾಯಿಸಿದನು?

ಅವನು ವಿನಯದಿಂದ, ಮೆಚ್ಚುಗೆಯಿಂದ, ಬೋಧನೆಯಿಂದ ಹಾಗೂ ಪ್ರೋತ್ಸಾಹದಿಂದ

ಹಾಗೂ ವಾಗ್ದಾನದ ಶಿಸ್ತಿನಿಂದ ಸರಿ ಪಡಿಸಿದನು (3 ಯೋಹಾನ 10). ಆ ಕಾರ್ಯದ ಯಶಸ್ಸನು ಅ ನಾಯಕನು ಸಾಧಿಸಬೇಕಿತ್ತು.

ಆ ಜವಾಬ್ದಾರಿಯ ಸಾಧನೆಯ ಕ್ರಮವೇನು? 3 ಯೋಹಾನದ ಪ್ರೀತಿಯ ಮುಖ್ಯಾಂಶವನು ಹೇಗೆ ಬಳಸಿದನು:

1. ಅವನು ಗಾಯನವನ್ನು ಪ್ರೀತಿಸಿದನು (3 ಯೋಹಾನ 1).

2. ಗಾಯನು ಅಭಿವೃದ್ಧಿ ಹೊಂದಬೇಕೆಂದು ಬಯಸಿದನು (3 ಯೋಹಾನ 2).

3. ಅವನ ಮಕ್ಕಳು ಸತ್ಯವನ್ನು ಅನುಸರಿಸಿದ್ದರಿಂದ ಸಂತೋಷಪಟ್ಟನು (3 ಯೋಹಾನ 3; ನೋಡಿ ವಚನ 4).

4. ಪ್ರೀತಿಯ ನಿಮಿತ್ತ ದಿಯೋತ್ರೇಫನು ಪಾಪವನ್ನು ಅಲಕ್ಷ್ಯ ಮಾಡಿದನು ಎಂದಿರದೆ, ನಾನು ಬಂದಾಗ ಅವನ ಪಾಪದ ನಿಮಿತ್ತ ಎಲ್ಲರಿಗೂ ನೆನಪು ಮಾಡುವೆನು ಅಂದನು (3 ಯೋಹಾನ 9, 10). ಯೋಹಾನನು ಸ್ವಾರ್ಥಕ್ಕಾಗಿ ಏನನ್ನು ಮಾಡದೆ, ಸಭೆಗಾಗಿ ತನ್ನ ನಾಯಕತ್ವದ ಯಥಾರ್ಥತೆಯನ್ನು ಬಳಸಿದನು.

ಈ ದಿನಗಳಲ್ಲಿ ಸಭೆಗಳ ಕಾರ್ಯಗಳು ಯಶಸ್ವಿಯಾಗಬೇಕಿದ್ದರೆ, ಆತ್ಮಗಳನ್ನು ಗೆಲ್ಲಬೇಕಿದ್ದರೆ, ಸಭೆಯು ವೃದ್ಧಿಯಾಗಬೇಕಿದ್ದರೆ, ಪ್ರೀತಿಸುವ ನಾಯಕರುಗಳ ಅಗತ್ಯವಿದೆ. ಸತ್ಯ ಮತ್ತು ಪ್ರೀತಿಯಲ್ಲಿ ನಡೆದು, ನಂಬಿಗಸ್ತರಾಗಿರುವಂತೆ ಸಭೆಗಳನ್ನು ಪ್ರೋತ್ಸಾಹಿಸುತ್ತಾರೆ. ದಿಯೋತ್ರೇಫನಂತಿರುವವರನ್ನು ಕ್ರಮ ಪಡಿಸುತ್ತಾರೆ.

**ಪ್ರೋತ್ಸಾಹಿಸುವ ದೇವ ಜನರು**

ಎರಡನೇ ವಿಧವಾದ ಕ್ರೈಸ್ತರನ್ನು 3 ಯೋಹಾನದಲ್ಲಿ ಗಾಯನಿಗೆ ಹೋಲಿಸಲಾಗಿದೆ.[4] ಸಹಾಯದ ಹಸ್ತವನ್ನು ನೀಡಿ, ಸಭೆಗಳನ್ನು ವೃದ್ಧಿಪಡಿಸುವವರ ಅಗತ್ಯವು ಸಭೆಗಳಿಗಿವೆ.

ಮೊದಲನೆಯದಾಗಿ ಯೋಹಾನನು ಆ ಸಹೋದರನನ್ನು ಎಲ್ಲಾ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಲಿ ಎಂದು ಪ್ರಾರ್ಥಿಸಿದನು (3 ಯೋಹಾನ 2).[5] ನಿನ್ನ ಆತ್ಮದಂತೆ, ನೀನು ಸಹ ವೃದ್ಧಿ ಹೊಂದಬೇಕೆಂದು ಯಾರಾದರು ಪ್ರಾರ್ಥಿಸಬೇಕು ಎಂದು ಬಯಸುವಿ ರಾ? ಇನ್ನೊಂದು ಕಡೆ, ಒಬ್ಬನು ಆರ್ಥಿಕ ಕೊರತೆಯನ್ನು ಹೊಂದಿ, ಅನಾರೋಗ್ಯದಿಂದ ಸಾಯಲಿ ಎಂಬ ಪ್ರಾರ್ಥನೆಯೇ? ಅಥವಾ ಅವರು ಆತ್ಮೀಕವಾಗಿ ಆರೋಗ್ಯವಾಗಿರಲಿ ಎಂದು ಗಾಯನಿಗೆ ಯೋಹಾನನು ಮಾಡಿದ ಪ್ರಾರ್ಥನೆಯಾಗಿದೆಯೇ? ಆ ಆತ್ಮೀಕ ಆರೋಗ್ಯದ ಗುಣಲಕ್ಷಣಗಳೇನು?

ಗಾಯನು ಕ್ರೈಸ್ತ ಗುಣಲಕ್ಷಣಗಳನ್ನು ಹೊಂದಿದ್ದನು. ಅವನು ಪ್ರೀತಿ, ಕರುಣೆ ತಾಳ್ಮೆ, ಶುಭವನ್ನು ಹೊಂದಿದ್ದನು. ಗಾಯನು ಸತ್ಯದ ಜೀವಿತವನ್ನು ಹೊಂದಿದ್ದನು. ಸಹೋದರರು ಆಗಾಗ್ಗೆ ನನ್ನ ಬಳಿಗೆ ಬಂದು ನಿನ್ನಲ್ಲಿರುವ ಸತ್ಯ "ಅಂದರೆ ಸತ್ಯದಲ್ಲಿ ನಡೆಯುತ್ತಿರುವನು" ಎಂದು ತಿಳಿಸಿದ್ದರು (3 ಯೋಹಾನ 3). ಅವನು ಸತ್ಯಕ್ಕೆ ವಿಧೇಯನಾಗಿದ್ದನು. ಅವನು ನಂಬಿದಂತೆ ನಡೆಯುತ್ತಿದ್ದನು.

*ಗಾಯನು ಸೇವಾ ಜೀವಿತವನ್ನು ಹೊಂದಿದ್ದನು.* ಅವನು ಸಹಾಯಿಸಿದ ಕುರಿತು ಯೋಹಾನನು ಬರೆದು,

> ಪ್ರಿಯನೇ, ಪರಿಚಯವಿಲ್ಲದವರಾದ ಸಹೋದರರಿಗೂ ನೀನು ಸತ್ಕಾರವನ್ನು ಮಾಡುವದರಲ್ಲಿ ನಂಬುವವನಿಗೆ ಯೋಗ್ಯನಾಗಿ ನಡೆಯುತ್ತೀ. ಅವರು ಸಭೆಯ ಮುಂದೆ ನಿನ್ನ ಪ್ರೀತಿಗೆ ಸಾಕ್ಷಿ ಹೇಳಿದರು. ಅವರನ್ನು ನೀನು ದೇವರ ಸೇವಕರಿಗೆ ಯೋಗ್ಯವಾದ ರೀತಿಯಿಂದ ಸಾಗ ಕಳುಹಿಸಿದರೆ ಚೆನ್ನಾಗಿರುವದು. ಯಾಕಂದರೆ ಅವರು ಕ್ರಿಸ್ತನ ಹೆಸರನ್ನು ಪ್ರಸಿದ್ಧಿಪಡಿಸುವದಕ್ಕೋಸ್ಕರ ಹೊರಟುಹೋಗಿದ್ದಾರೆ ಮತ್ತು ಅನ್ಯಜನಗಳಿಂದ ಏನೂ ತೆಗೆದುಕೊಳ್ಳುವವರಲ್ಲ. ಅದದರಿಂದ ನಾವು ಸತ್ಯಕ್ಕೆ ಸಹಕಾರಿಗಳಾಗುವಂತೆ

ಅಂಥವರನ್ನು ಸೇರಿಸಿಕೊಳ್ಳುವ ಹಂಗಿನಲ್ಲಿದ್ದೇವೆ (3 ಯೋಹಾನ 5-8).

ವಚನ 5ರಲ್ಲಿ ನಮೂದಿಸಿರುವ ಸಹೋದರರು ಯಾರು? ಅವರು ಅಪೊಸ್ತಲರ ಬೋಧನೆಗಳನ್ನು ಇತರೆ ಕಡೆಗಳಿಗೆ ತಲುಪಿಸುತ್ತಿದ್ದವರು. ಅಂಥವರಿಗೆ ಗಾಯನು ಸಹಾಯಿಸಿದನು.

ಗಾಯನು ಅವರಿಗೆ ಮಾಡಿದ್ದಾದರೂ ಏನು? ಅವನು ಅರಿಯದ ಪ್ರವಾಸಿಗಳಂದ ಸಹೋದರರಿಗೆ ಸಹಾಯಿಸಿದನು[6] - ಅವರು ತನ್ನ ಕ್ಷೇತ್ರಕ್ಕೆ ಬಂದಾಗ ಅವರಿಗೆ ಸಹಕರಿಸಿದನು. ಸುವಾರ್ತೆಗಾಗಿ ಅವರಿಗೆ ಅತಿಥಿಸತ್ಕಾರ ಮಾಡಿದನು. ಪರಿಚಯವಿಲ್ಲದವರನ್ನು *ಸತ್ಕರಿಸಿ* ಸಾಗಕಳುಹಿಸಿದನು. ಸುವಾರ್ತೆಯು ಪ್ರಕಾಲವಾಗುವದಕ್ಕೆ ಹಣ ಸಹಾಯಮಾಡಿದನು.[7]

ಈ ಕ್ರೈಸ್ತ ಸಹೋದರರರನ್ನು ಕಳುಹಿಸಬೇಕೆಂದು ಗಾಯನು ಕೇಳಿಕೊಂಡನು ಮತ್ತು ಆತನು ಹಾಗೆ ಮಾಡಿರಬಹುದೆಂದು ನಾವು ಊಹಿರಬಹುದು. "ಸಾಗಕಳುಹಿಸಿದರೆ" ಎಂಬ ಮಾತು ಅವರ ಪ್ರಯಾಣದಲ್ಲಿ ಬಹುಶ ಆತನ ಪ್ರಯಾಣ ಸೌಕರ್ಯದ ಕರ್ಚುಗಳನ್ನು ಸಹಕರಿಸಿರಬಹುದು.[8] ಆತನು ಕೊಡುವುದರಲ್ಲಿ ದಾರಳಾವಾಗಿದ್ದನು. ಸುವಾರ್ತಾ ವ್ಯಾಪ್ತಿ ಗಾಗಿ ಆತನ ಹಣದಿಂದ ಸಹಕರಿಸುವವನಾಗಿದ್ದನು.

ತನ್ನ ಪ್ರೀತಿಯನ್ನು ಅವರಿಗೆ ತೋರಿದಂಥ ವಿಚಾರವನ್ನು ಇತರೆ ಸಭೆಗಳಿಗೆ ಸಾಕ್ಷಿಯಾಗಿ ಹೇಳಿದರು (3 ಯೋಹಾನ 6). ಅವರಿಗೆ ಸಹಾಯ ಮಾಡುವಲ್ಲಿ ತನ್ನ ಪ್ರೀತಿಯನ್ನು ತೋರ್ಪಡಿಸಿದನು. ಸಹಾಯ ಮಾಡದ ಪ್ರೀತಿಯನ್ನು ಪ್ರೀತಿ ಎನ್ನುವದಿಲ್ಲ. ಅವನು ಪ್ರೀತಿಸುವವನಾಗಿದ್ದನು.

ಈಗಿನ ಕಾಲದ ಸಭೆಗಳಿಗೆ, ಇಂಥಹ ದೇವ ಜನರ ಅಗತ್ಯವಿದೆ. ಅಂಥವರು ಪ್ರಯಾಣಮಾಡಿ ಪ್ರಸಂಗ ಹಾಗೂ ಬೋಧನೆ ಮಾಡುವವರೇ ಆಗಿರಬೇಕೆಂಬ ನಿಯಮವಿಲ್ಲದೆ, ಅಂತಹ ಕೆಲಸಗಾರರಿಗೆ ಸಹಾಯ ಮಾಡುವವರು ಸಹ ಸೇರಿದ್ದಾರೆ. ನೈತಿಕವಾದ, ಆರ್ಥಿಕವಾದ, ವ್ಯಕ್ತಿಗತ ಸಹಾಯ ಮಾಡುವವರು ಆಗಿದ್ದಾರೆ. ಗಾಯನು ತನ್ನ ಮನೆಯನ್ನು ಅವರಿಗಾಗಿ ತೆರೆದಂತೆ, ತಾವುಗಳು ಸಹ ಮಾಡುವವರಾಗಿದ್ದಾರೆ. ಸತ್ಕಾರ, ಉದಾರತೆ, ಹಾಗೂ ಪ್ರೀತಿಯ ಜನರ ಅಗತ್ಯವು ಸಭೆಗಿದೆ.

**ಸ್ವಾರ್ಥವನ್ನು ತ್ಯಜಿಸುವ ಸೈನಿಕರು**

*ಸೌವಾರ್ತಿಕರು.* ಮೂರನೆಯದಾಗಿ 3ನೇ ಯೋಹಾನ ಪತ್ರಿಕೆಯು ಸೇವಕರು ಹಾಗೂ ಸೌವಾರ್ತಿಕರ ಕುರಿತು ತಿಳಿಸುತ್ತದೆ. ಸಭೆಯ ಅಭಿವೃದ್ಧಿಗೆ ಇಂಥಹ ಸೇವಕರ ಅಗತ್ಯವಿದೆ ಎಂದು ತೋರಿ ಬರುತ್ತದೆ. "ಯಾಕಂದರೆ ಅವರು ಕ್ರಿಸ್ತನ ಹೆಸರನ್ನು ಪ್ರಸಿದ್ಧಿ ಪಡಿಸುವದಕ್ಕೋಸ್ಕರ ಹೊರಟು ಹೋಗಿದ್ದಾರೆ ಮತ್ತು ಅನ್ಯ ಜನಗಳಿಂದ ಏನೂ ತೆಗೆದುಕೊಳ್ಳುವವರಲ್ಲ. ಆದದರಿಂದ ನಾವು ಸತ್ಯಕ್ಕೆ ಸಹಕಾರಿಗಳಾಗುವಂತೆ, ಅಂಥವರನ್ನು ಸೇರಿಸಿಕೊಳ್ಳುವ ಹಂಗಿನಲ್ಲಿದ್ದೇವೆ ಎಂದು ಯೋಹಾನನು ತಿಳಿಸಿದನು" (3 ಯೋಹಾನ 7, 8).

ಈ ವ್ಯಕ್ತಿಗಳ ಬಗ್ಗೆ ಏನನ್ನು ಕಲಿಯುತ್ತೇವೆ?

(1) ಅವರಿಗೆ ಸಹಾಯ ಮಾಡಿದವರಿಗಾಗಿ ಕೃತಜ್ಞರಾಗಿರಬೇಕು ಯೋಹಾನ ಗಾಯನಿಗೆ ಅವರು ಸಭೆಯ ಮುಂದೆ ನಿನ್ನ ಪ್ರೀತಿಗೆ ಸಾಕ್ಷಿ ಹೇಳಿದರು (3 ಯೋಹಾನ 6).

(2) ದೇವರ ಸೇವೆಯೇ ಅವರ ಮೊದಲ ಆದ್ಯತೆ ಅವರು ಕ್ರಿಸ್ತನ ಹೆಸರನ್ನು ಪ್ರಸಿದ್ಧಿ ಪಡಿಸುವದಕ್ಕೋಸ್ಕರ ಹೊರಟು ಹೋಗಿದ್ದಾರೆ (3 ಯೋಹಾನ 7).

(3) ಅವರು ಕ್ರಿಸ್ತನಿಗಾಗಿ ಪರಿತ್ಯಾಗ ಮಾಡಿದ್ದಾರೆ; “ಅವರು ಅನ್ಯರಿಂದ ಏನನ್ನೂ ಬಯಸಲಿಲ್ಲ” (3 ಯೋಹಾನ 7).

ಈ ಸೈನಿಕರು ಕ್ರಿಸ್ತನಿಗಾಗಿ ಆರ್ಥಿಕ ತ್ಯಾಗವನ್ನು ಮಾಡಿದರು. ಅವರಿರುವಂಥ ಪರಿಸ್ಥಿತಿಯಲ್ಲಿ ಈ ಕಾರ್ಯವು ಕಷ್ಟಕರವಾಗಬಹುದು - ಅವರಿಗೆ ಹಣವು ದೊರಕುವ ಖಾತರಿ ಇಲ್ಲದಿದ್ದರೂ, ಅವರು ಸಹಾಯಕ್ಕಾಗಿ ಸಹೋದರರನ್ನೂ, ಅವಲಂಭಿಸಿ, ಅನ್ಯರಿಂದ ಯಾವುದೇ ಸಹಾಯವನ್ನು ಬಯಸಬಾರದಿತ್ತು.[9] ನಾವು ಇಂಥಹ ಕಾರ್ಯವನ್ನು ಮಾಡಬಹುದು? (ಪ್ರಸಂಗಿ ಹಾಗೂ ಸೌವಾರ್ತಿಕರಿಗೆ ಮಾತ್ರವಲ್ಲದೆ) ಪ್ರತಿಯೊಬ್ಬರು ಆರ್ಥಿಕ ತ್ಯಾಗವನ್ನು ಮಾಡಲೇಬೇಕು.

ಈ ಸೇವಕರುಗಳು ದೇವರ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಅವರು ದೇವರ ಸೈನ್ಯದಲ್ಲಿ ಮಂಚೂಣಿಯಲ್ಲಿದ್ದರು. ಅದಕ್ಕಾಗಿ ತಮ್ಮ ಪೂರ್ಣವಾದ ಜೀವಿತವನ್ನೇ ಮೀಸಲಿಟ್ಟಿದ್ದರು. ದೇವರ ವಾಕ್ಯವನ್ನು ಪ್ರಚುರಪಡಿಸುವಂಥ ಇಂತಹ ಸೇವಕರ ಅಗತ್ಯತೆಯ ಸಭೆಗಳಿಗಿರುತ್ತದೆ. ಎಲ್ಲರೂ ಮಾಡುವ ಅಗತ್ಯವಿಲ್ಲದಿದ್ದರೂ, ತಮ್ಮ ಜೀವಿತವನ್ನು ಸುವಾರ್ತೆ ಗಾಗಿ ಅರ್ಪಿಸಬೇಕು.

ಕ್ರೈಸ್ತರ ಈ ಕಾರ್ಯವನ್ನು ಮಾನ್ಯಮಾಡಬೇಕು. ಅವರು ಸುವಾರ್ತೆ ಸೇವೆಯಲ್ಲಿ ಮುಂದುವರೆಯುವಂತೆ, ಪ್ರೋತ್ಸಾಹ ಮಾಡಬೇಕು. ಗಾಯನು ಈ ವಿಧದ ಪ್ರೋತ್ಸಾಹ ಮಾಡ ಬೇಕೆಂದು ಯೋಹಾನನು ತಿಳಿಸಿದನು.

1. ಅವರನ್ನು ನೀನು ದೇವರ ಸೇವಕರಿಗೆ ಯೋಗ್ಯವಾದ ರೀತಿಯಿಂದ ಸಾಗಕಳುಹಿಸಿದ್ದು ಒಳ್ಳೇಯದು (3 ಯೋಹಾನ 6). ಆದರೆ ಅಂಥವರ ಸಹಾಯವು ಕನಿಷ್ಟವಾಗಿರಬಾರದು, ಅವರ ಕೆಲಸವನ್ನು ಹಗುರವಾಗಿ ಪರಿಗಣಿಸಬಾರದು?

2. ಅವರು “ಅನ್ಯರಿಂದ ಏನೂ ತೆಗೆದುಕೊಳ್ಳದೆ ಹೊರಟು ಹೋದರು” (3 ಯೋಹಾನ 7) ಆದ್ದರಿಂದ “ಅವರಿಗೆ ಸಹಾಯಿಸಬೇಕು” (3 ಯೋಹಾನ 8); ನಾವು ಅವರಿಗೆ ಉದಾರವಾಗಿ, ಸಹಾಯಿಸಬೇಕು.

3. ಕೊಡುವದರಿಂದ “ನಾವು ಸತ್ಯಕ್ಕೆ ಸಹಕಾರಿಗಳಾಗುತ್ತೇವೆ” (3 ಯೋಹಾನ 8).[10] ಅಂದರೆ ಅವರ ಸಾಧನೆ ನಮ್ಮ ಸಾಧನೆಯಾಗುತ್ತದೆ.

ವಚನ 11ರಲ್ಲಿ “ಕೆಟ್ಟದ್ದು” ಎಂದು ಬರೆದದೆ. ಅದನ್ನು ದಿಯೋತ್ರೊಮನಿಗೆ ಹೋಲಿಸಿದೆ ಒಳ್ಳೆಯದನ್ನು ದೆಮೆತ್ರೆಯನಿಗೆ ಹೋಲಿಸಿದೆ. ದಿಯೋತ್ರೊಮನಂತಿರದೆ, ದೇಮೆತ್ರಿಯನಂತೆ ಇರಬೇಕೆಂಬದೇ ಅವರ ಕುರಿತ ವಿವರಣೆಯನ್ನು ನಾನು ನೀಡುತ್ತೇನೆ.[11]

*ದೇಮೇತ್ರಿಯನು.* ಈತನು ಪೂರ್ಣಾವದಿಯ ಸೇವಕನಿರಬಹುದು: “ದೇಮೇತ್ರಿಯನು ಸಂಭವಿತನೆಂದು ಎಲ್ಲರಿಂದಲೂ ಸಾಕ್ಷಾತ್ ಸತ್ಯದಿಂದಲೂ ಸಾಕ್ಷಿಹೊಂದಿದ್ದಾನೆ. ನಾವು ಸಹ ಅವನ ವಿಷಯದಲ್ಲಿ ಸಾಕ್ಷಿ ಹೇಳುವವರಾಗಿದ್ದೇವೆ; ನಮ್ಮ ಸಾಕ್ಷಿ ಸತ್ಯವಾದದ್ದೆಂದು ನೀನು ಬಲ್ಲೆ” (3 ಯೋಹಾನ 12).

ದೇಮೇತ್ರಿಯನು ಯಾರೆಂದು ಈ ಪತ್ರಿಕೆಯಲ್ಲಿ ತಿಳಿಸಿರುವದಿಲ್ಲ ಒಂದು ವೇಳೆ ಅವನು ಯೋಹಾನನಿಗೆ ಪತ್ರಿಕೆಗಳನ್ನು ರವಾನಿಸುವವನಿರಬಹುದು. ಅವನು ನೀಡಿದ ಕೆಲಸಗಾರರ ಪಟ್ಟಿಗೆ ಅವನು ಸೇರಿರಬಹುದು.

ಅವನ ಕುರಿತಾದ ಸಾಕ್ಷಿಯನ್ನು ಗಮನಿಸಿರಿ. ಅವನು ನಂಬಿಗಸ್ತನೆಂದು, ಅವನ ಕೆಲಸದ ಕುರಿತು ಆ “ಸತ್ಯವೇ ಸಾಕ್ಷಿ” ನೀಡದೆ, ಸತ್ಯದಂತೆ ಜೀವಿಸಿದನು. ಅವನ ಸುಗುಣದ ಬಗ್ಗೆಯೂ ಬರೆದದೆ. ಇಂತಹ ವಿಧವಾದ ಜೀವಿತವನ್ನು ಜೀವಿಸುವ ಕ್ರೈಸ್ತರ ಕುರಿತು ಈ ಮೇಲಿನ ಸಾಕ್ಷಿಯನ್ನು ನೀಡಬಹುದಾಗಿದೆ.

## ಸಭೆಯ ಕಾರ್ಯಗಳಿಗೆ ಅಡಿಪಡಿಸುವ ಕ್ರೈಸ್ತರು

ದಿಯೊತ್ರೇಫನನ್ನು ಎರಡನೇ ಗುಂಪಿನ ಕ್ರೈಸ್ತರಿಗೆ ಹೋಲಿಸಲಾಗಿದೆ. ಅವನು ಕರ್ತನ ಕಾರ್ಯಗಳಿಗೆ ಸಹಾಯಿಸದೆ, ಅದಕ್ಕೆ ಅಡ್ಡಿಮಾಡುವವನಾಗಿದ್ದಾನೆ.

### ದಿಯೊತ್ರೇಫನನು ಮಾಡಿದ ಸಂಗತಿಗಳೇನು

ದಿಯೊತ್ರೇಫನನ್ನು ಎಸಗಿದ ತಪ್ಪೇನು? ಅವನು ನಿಸ್ವಾರ್ಥರಾದ ಸೈನಿಕರನ್ನು ಅಂಗೀಕರಿಸಲಿಲ್ಲ: "ಅವನು ಸಹೋದರರರನ್ನು ಸ್ವೀಕರಿಸಲಿಲ್ಲ" (3 ಯೋಹಾನ 10). ಇತರರೂ ಸಹ ಅವರನ್ನು ಅಂಗೀಕರಿಸದಂತೆ ತಡೆದನು. ಅವರನ್ನು ಸಭೆಯೊಳಗಿಂದ ಬಹಿಷ್ಕರಿಸಿದನು.

ಅಪೊಸ್ತಲನಾದ ಯೋಹಾನನ ಅಧಿಕಾರವನ್ನು ತಿರಸ್ಕರಿಸಿದನು. ದಿಯೊತ್ರೇಫನ ನಾಯಕತ್ವದ ಬಗ್ಗೆಯೂ ಅವನು ಬರೆದಿದ್ದನು (3 ಯೋಹಾನ 9ಎ). ಆದರೆ ಅವನು ಗೌರವವನ್ನು ನೀಡಲಿಲ್ಲ. ಆ ಪತ್ರಿಕೆ 1 ಅಥವಾ 2ನೇ ಪತ್ರಿಕೆ ಎಂಬುದು ನಿಖರವಾಗಿರುವದಿಲ್ಲ.[12] ಪ್ರವಾಸಿಗರಾದ ದೇವರ ಸೇವಕರ ಪ್ರೊತ್ಸಾಹಕ್ಕಾಗಿ ಈ ಪತ್ರಿಕೆಗಳನ್ನು ಬರೆದಿರಬಹುದು. ದೆಯೋತ್ರೆಫನ ಕುರಿತು, ಅವನು ನಮ್ಮ ಮಾತನ್ನು ಅಂಗೀಕರಿಸುವದಿಲ್ಲ (3 ಯೋಹಾನ 9, 10). ಒಂದ ವೇಳೆ ಅವನು ತನ್ನದೇ ಆದ ಸುವಾರ್ತೆಯನ್ನು ಹೊಂದಿರಬಹುದು. ಯೋಹಾನನ ಬೋಧನೆಗಳನ್ನು ಒಪ್ಪದೆ ಇರಬಹುದು. ನಿಖರವಾದ ಒಂದು ಸತ್ಯವನ್ನ ಅವನು ಸ್ವೀಕರಿಸದೆ ಇರಬಹುದು.[13] ಅವನು ಸುಳ್ಳು ಬೋಧಕನಾಗಿರಬಹುದು. ಹೇಗೂ ಅವನು ಯೋಹಾನನ ನಾಯಕತ್ವಕ್ಕೆ ತದ್ವಿರುದ್ಧವಾಗಿದ್ದನು.

### ದಿಯೋತ್ರೇಫನ ಏಕೆ ಈ ರೀತಿ ವರ್ತಿಸಿದನು

ಪ್ರವಾಸಿಗಳಾದ ದೇವ ದಾಸರನ್ನು ಅವನು ಏಕೆ ನಿರಾಕರಿಸಿದನು? ಅವನು ಯೋಹಾನನ ಅಧಿಕಾರವನ್ನು ಏಕೆ ನಿರಾಕರಿಸಿದನು? ಅವನು ಸಭೆಯಲ್ಲಿ ಪ್ರಮುಖನಾಗಿರಲು ಯತ್ನಿಸಿದನು (3 ಯೋಹಾನ 9ಬಿ). (KJVಯಲ್ಲಿ, ಅವನು ಮೊದಲಿಗನಾಗಲು ಬಯಸಿದನು.) ಅವನು ಒಂದು ಸಾಮ್ರಾಜ್ಯವನ್ನು ಕಟ್ಟುತ್ತಿದ್ದನು,[14] ಅದನ್ನು ಸಭೆಯಲ್ಲಿ ಕಟ್ಟಲು ಬಯಸಿದನು. ಅವನ ಈ ಅಧಿಕಾರಕ್ಕೆ ಯೋಹಾನನಾಗಲೀ, ಅಥವಾ ಪ್ರವಾಸಿಗಳಾದ ದೇವ ಸೇವಕರಾಗಲಿ ಅಡ್ಡಿಯಾಗಲು ಅವನು ಬಯಸಲಿಲ್ಲ.

ಈ ದಿವಸಗಳಲ್ಲೂ, ಈ ವಿಧವಾದ ಜನರಿದ್ದಾರೆಯೇ? ಹೌದು ತಮ್ಮ ಸಾಮ್ರಾಜ್ಯ ಕಟ್ಟಲು ಬಯಸುವಂಥ ಜನರನ್ನು ನಾನು ಕಂಡಿದ್ದೇನೆ, ಅವರು ಸೇವಕರಾಗಿರದೇ, ಇತರ ದೇವ ಸೇವಕರನ್ನು ಸೇರಿಸಿಕೊಳ್ಳದೆ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುತ್ತಾರೆ.

ಅನೇಕ ಸ್ಥಳೀಯ ಸಭೆಗಳಲ್ಲಿ "ದಿಯೋತ್ರೇಫನಂತಹ ಬೋಧನೆಗಳನ್ನು ಹೊಂದಿದ್ದಾರೆ"[15] - ಅವರು ಮೊದಲಿಗರಾಗಿರಲೂ ಅಧಿಕಾರ ಹೊಂದಿರಲೂ, ಬಯಸುತ್ತಾರೆ. ಯಾರು ಅಧಿಕಾರ ಚಲಾಯಿಸಬೇಕು ಎಂದು ತವಕ ಪಡುತ್ತಾರೆ. ನಮ್ಮೊಳಗೂ ದಿಯೋತ್ರೇಫನ ಕೆಲವು ಮನೋಭಾವನೆಗಳು ಮನೆ ಮಾಡಿವೆ. ನಮಗೆ ಎಲ್ಲರೂ ಆದ್ಯತೆ ಕೊಡಬೇಕೆಂದು ಬಯಸುತ್ತೇವೆ. ಇಂತಹ ಆಶೆಗಳಿಗೆ ವಿರುದ್ಧವಾಗಿ ನಾವುಗಳು ಹೋರಾಡಬೇಕು. ನಾವು ಯೇಸುವಿನ ನಿಧರ್ಶನವನ್ನು ಪಾಲಿಸುವ ಜನರಾಗಿರಬೇಕು.

> ಮೊದಲನೆಯವನಾಗಬೇಕೆಂದಿರುವವನು ಎಲ್ಲರ ಆಳಾಗಿರಬೇಕು. ಮನುಷ್ಯಕುಮಾರನು ಸಹ ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು (ಮಾರ್ಕ 10:44, 45).

ನಾವು ಮೊದಲಿಗರಾಗಬೇಕು ಎಂದಿದ್ದರೆ, ಸೇವಕರಾಗಬೇಕು. ಆಗ ಮಾತ್ರ ಸಭೆ

ವೃದ್ಧಿಯಾಗುತ್ತದೆ. "ಲಾಭವನ್ನು ಬಯಸದಂತ ಸೇವಕರಾಗಿರಬೇಕು."

## ಸಭೆಗೆ ಅಡ್ಡಿಪಡಿಸುವ ಇತರರು

ಕ್ರೈಸ್ತರೇ, ಸಭೆಯ ಕುರಿತು ನಕರಾತ್ಮಕವಾದ ಕಾರ್ಯಗಳನ್ನು ಮಾಡುತ್ತಾರೆ:

(1) ಸುವಾರ್ತೆಯನ್ನು ಸಾರದವರು, ಹಾಗೂ ಸುಳ್ಳು ಬೋಧಕರುಗಳು ಸಭೆಯನ್ನು ಅಪಾಯದ ಸ್ಥಿತಿಗೆ ತರುತ್ತಾರೆ.

(2) ಪಾಪದಲ್ಲಿ ಮುಂದುವರೆಯುವವರು ಸಭೆಯನ್ನು ಅಗೌರವಿಸುತ್ತಾರೆ.

(3) ದೇಣಿಗೆ ನೀಡದವರು - ತಮ್ಮನ್ನೇ ಸಮರ್ಪಿಸಿಕೊಳ್ಳದವರು, ಸಮಯ, ಹಣ ವರಗಳನ್ನು ಉಪಯೋಗ ಮಾಡದವರಿಂದ ಸಭೆ ಕುಂಠಿತವಾಗುತ್ತದೆ.

(4) ಸಭಾ ನಾಯಕರಿಗೆ ಒಳಗಾಗದವರು ಸಭೆಗೆ ಅಡ್ಡಿಯಾಗಿರುತ್ತಾರೆ. ಕೆಲವು ಸಾರಿ ನಾಯಕತ್ವದ ಕೊರತೆಯಾಗಿದೆ, "ಅನುಸರಿಸದವರು" ಅಡ್ಡಿಯಾಗುತ್ತಾರೆ.

(5) ಟೀಕೆ ಮಾಡುವದರಿಂದ ಸಭೆಯ ಸಾಧನೆ ಕುಂಠಿತವಾಗುತ್ತದೆ.

(6) ಸಭೆಗೆ ಹಿತವಾಗುವಂಥ ಸಂಗತಿಗಳಿಗೆ ತೊಂದರೆ ಮಾಡುವದರಿಂದ ಸಭೆಯು ಬೆಳೆಯಲಾರದು. "ನಾನು ಈ ಸಭೆಯಲ್ಲಿ ಐವತ್ತು ವರ್ಷದಿಂದ ಇದ್ದೇನೆ, ಅನೇಕ ಬದಲಾವಣೆಗಳನ್ನು ಕಂಡಿದ್ದೇನೆ. ನಾನು ಅವರಿಗೆಲ್ಲಾ ವಿರುದ್ಧವಾಗಿದ್ದೆನು" ಎಂಬ ಹೇಳಿಕೆ ಯಂತಿರುತ್ತಾರೆ.

## ಮುಕ್ತಾಯ

ನಾನು ಒಂಬತ್ತನೇ ತರಗತಿಯಲ್ಲಿರುವಾಗ, ಒಕ್ಲಾಹೋಮದ, ಮೂರ್ ಪಟ್ಟಣದ ಜೂನಿಯರ್ ಹೈ ಫುಟ್ ಬಾಲ್ ತಂಡದಲ್ಲಿ ಆಟಗಾರನಾಗಿದ್ದೆ. ಜ್ಯಾಕ್ ಫ್ರಾಸ್ಟ್‌ರವರು ನನಗೆ ತರಬೇತುದಾರರಾಗಿದ್ದರು. ಒಂದು ದಿನ ತರಬೇತಿಯ ಸಂದರ್ಭದಲ್ಲಿ ಅವರು ನನಗೆ ಚೆಂಡನ್ನು ತಡೆಯಬಾರದೆಂದು ತಿಳಿಸಿದರು. ಹೇಗೂ ನಾನುಒಂದು ತಪ್ಪನ್ನು ಎಸಗಿದ್ದೆನು. ನಾನು ಮುಂದಾಗಿ ಹೋಗಿ ಒಬ್ಬನನ್ನು ಕೆಡವಿಬಿಟ್ಟನು. ಆಗ ನನ್ನ ತರಬೇತುದಾರನು. "ರೋಪರ್ ನೀನು ತಡೆಯಲಾರದೆ ಇದ್ದರೆ, ನೀನು ಆ ಸ್ಥಳವನ್ನು ಏಕೆ ಬಿಡಬಾರದು" ಎಂದು ಕೂಗಿದರು.

ಸಭೆಯ ಕಾರ್ಯಗಳಿಗೆ ಅಡಚಣೆ ಉಂಟುಮಾಡುವವರಿಗೆ ಇದು ಎಚ್ಚರಿಕೆಯ ಮಾತುಗಳಾಗಿವೆ. ನಾವು ಅಂಥವರಿಗೆ, "ನೀವು ತಡೆಯಲಾಗದಿದ್ದರೆ, ಸಭೆಯ ಕಾರ್ಯಕ್ಕೆ ಸಹಾಯಕ ರಾಗದ್ದಿರೆ - ನೀವು ಆ ಮಾರ್ಗದಿಂದ ಬೇರೆ ಕಡೆಗೆ ಹೋಗಿರಿ!" ಸಭಾ ಕೆಲಸಕ್ಕೆ ನಾವುಗಳು ಅಡ್ಡಿಯಾಗಿರಬಾರದು.

ಇತರರು ಕೆಲಸಮಾಡುವಾಗ ಅಡ್ಡಿಪಡಿಸಬಾರದು: ಸಭೆಯು ಮಾಡಬೇಕಾದ ಸಾಧನೆಯನ್ನು ಸಾಧಿಸದಂತೆ ಅಡಚಣೆಯಾಗಿರಬಾರದು. ನೀನು ಪ್ರೀತಿಯಿಂದ ತುಂಬಿರುವ ನಾಯಕನೋ, ಸಹಾಯಿಸುವ ದೇವರ ಮಗನೋ, ನಿಸ್ವಾರ್ಥವಿರುವ ಸೈನಿಕನೇ? ಅಥವಾ ದಿಯೋತ್ರೇಫನೋ - ಅವನು ಸಭಾಕಾರ್ಯಕ್ಕೆ ಅಡ್ಡಿಯಾಗಿದ್ದನು. ನೀನು ಸಹಾಯಿಸುವವನೋ ಅಥವಾ ಅಡ್ಡಿಪಡಿಸುವವನೋ ಸಭೆಯನ್ನು ಕಟ್ಟುವವನೋ ಅಥವಾ ಮುರಿಯುವವನೋ? ಸಭಾ ವೃದ್ಧಿಗೆ ಪ್ರೋತ್ಸಾಹ ನೀಡುವವನೋ? ಈ ಎರಡು ಗುಂಪಿನಲ್ಲಿ, ಯಾವ ಗುಂಪಿಗೆ ನೀವು ಸೇರಿರುವಿರಿ? ಯೋಚಿಸಿ,

ನಿನ್ನ ಪಾಪ ಜೀವಿತವು ಸಭೆಯ ವೃದ್ದಿಗೆ ಅಡಚಣೆಯಾಗಿದ್ದರೆ, ಅದನ್ನು ಸರಿ ಪಡಿಸುವ ಸಮಯವು ಇದೇ ಆಗಿದೆ.

ಟಿಪ್ಪಣಿಗಳು

[1]ಆ ಸಮಯದಲ್ಲಿ ಇತರೆ ಪತ್ರಿಕೆಗಳು ಬರೆಯಲ್ಪಟ್ಟಿದ್ದವು. F. F. Bruce, ಪ್ರಕಾರ "ಮೂರನೇ ಪತ್ರಿಕೆ, ವ್ಯಯಕ್ತಿಕವಾದ ಪತ್ರಿಕೆಯಾಗಿದೆ. ಎರಡನೆ ಪತ್ರಿಕೆಯು ರೋಮಾ ಗ್ರಿಕ್ ಪ್ರಪಂಚದ ಅಂದಿನ ಶೈಲಿಯಲ್ಲಿಯೇ ಇರುತ್ತದೆ." (F. F. Bruce, *The Epistles of John: Introduction, Exposition and Notes* [N.p.: Pickering & Inglis, 1970; reprint, Grand Rapids, Mich.: Wm. B. Eerdmans Publishing Co., 1986], ಮೊದಲನೆಯ ಶತಮಾನದಲ್ಲಿ ಬರೆಯಲ್ಪಟ್ಟ ಪತ್ರಿಕೆಗಳಿಗಿಂತ ಈ ಪತ್ರಿಕೆಗಳು ಉದ್ದವಾಗಿವೆ. [2]ಅಪೊಸ್ತಲನಾದ ಯೋಹಾನನು ಆಸ್ಯ ಸೀಮೆಯ ಸಭೆಗಳಲ್ಲಿ ಮಾಡಿದ ಸೇವೆಯ ಕುರಿತಾದ ಸಂಗತಿಗಳು ಒಳಗೊಂಡಿದೆ. (D. A. Carson, Douglas J. Moo, and Leon Morris, *An Introduction to the New Testament* [Grand Rapids, Mich.: Zondervan, 1992], 232.) [3]ಆಯ್ಕೆ ಮಾಡಿ ಕಳುಹಿಸಲ್ಪಟ್ಟ ಸೇವಕರ ಪ್ರಯಾಣದ ಮೊದಲ ಕರ್ಚುವೆಚ್ಚಗಳನ್ನು ಸಭೆಯವರೇ ನೀಡುತ್ತಿದ್ದರು. ಮಾರ್ಗ ಮಧ್ಯದಲ್ಲಿದ್ದ ಸಭೆಗಳವರು ಮುಂದಿನ ಕರ್ಚನ್ನು ನೀಡುತ್ತಿದ್ದರು. (Bruce, 149; J. W. Roberts, *The Letters of John,* The Living Word Commentary [Austin, Tex.: R. B. Sweet Co., 1968], 175.) [4]ಗಾಯನು, ಯೋಹಾನನ ಮೂಲಕ ಪರಿವರ್ತನೆ ಹೊಂದಿರಬಹುದು (Roberts, 173.) ಯೋಹಾನನು "ಅವನನ್ನು ತಂದೆಯ ಪ್ರೀತಿಯಿಂದ ಪ್ರೀತಿಸಿದ್ದನು." (Bruce, 149). "ಹೊಸ ಒಡಂಬಡಿಕೆಯಲ್ಲಿ ಗಾಯನು ಎಂಬ ಇತರೆ ಮೂರು ವ್ಯಕ್ತಿಗಳಿರುವರು" (ಅಪೊಸ್ತಲರ ಕೃತ್ಯಗಳು 19:29; ಅಪೊಸ್ತಲರ ಕೃತ್ಯಗಳು 20:4ಭ ಯೆರೆಮೀಯ 16:23). ರೊಮಾಯದಲ್ಲಿ "ಗಾಯನು" ಎಂಬುದು ಸಾಮಾನ್ಯ ಹೆಸರಾಗಿತ್ತು. ಈ ಗಾಯನು ಇತರ ಗಾಯರೊಂದಿಗೆ ಗುರುತಿಸಬಾರದು. (Bruce, 147.) [5]J. W. Roberts ಪ್ರಕಾರ ಗಾಯನ ಆತ್ಮೀಕತೆಯಲ್ಲಿ ವೃದ್ಧಿ ಹೊಂದಿದ್ದನು. ಮತ್ತು ಇತರ ವಿಷಯದಲ್ಲಿ ಕೂಡ ಅಭಿವೃದ್ಧಿ ಹೊಂದಿರಬಹುದು. (Roberts, 172.) [6]"ಸಹೋದರರಿಗೆ ಸೇವೆ ಸಲ್ಲಿಸುವಾಗ ಪ್ರತ್ಯೇಕಿಸಿ ಪರದೇಶಿಗೆ ಯೋಗ್ಯವಾದ ಕಾರ್ಯವನ್ನು ಮಾಡು." ಎಂದು 5ನೇ ವಚನವನ್ನು RSV ಭಾಷಾಂತರಿಸಿದೆ. [7]ಕ್ರೈಸ್ತರು ಅತಿಥಿ ಸತ್ಕಾರ ಮಾಡಬೇಕು. ನೋಡಿ ರೋಮಾಪುರ 12:13; ಇಬ್ರಿಯ 13:2; 1 ಪೇತ್ರ 4:9; 1 ತಿಮೊಥೆ 3:2; ತೀತ 1:8; 1 ತಿಮೊಥೆ 5:10. [8]"ಬೀಳ್ಕೊಡು" ಎಂಬ ಕ್ರಿಯಾ ಪದದಲ್ಲಿ ಸಹಾಯ ಮಾಡು ಎಂಬುದು ಅಡಕವಾಗಿದೆ. ಹೋಲಿಸು ಅಪೊಸ್ತಲರ ಕೃತ್ಯಗಳು 15:3; ರೋಮಾಪುರ 15:24; 1 ಕೊರಿಂಥ 16:6, 11; 2 ಕೊರಿಂಥ 1:16. (Roberts, 175.) [9]ಪೌಲನ ಪದ್ಧತಿಯಂತೆ ಇದೆ ಎಂದು Roberts ಸೂಚಿಸಿದರು. ನೋಡಿ ಅಪೊಸ್ತಲರ ಕೃತ್ಯಗಳು 18:3; 20:34; 1 ಕೊರಿಂಥ 9:6-18; 2 ಕೊರಿಂಥ 11:7-11; ಫಿಲಿಪ್ಪಿ 4:14-19; 1 ಥೆಸಲೋನಿಕ 2:9. (Ibid., 175-76.) (ಹೋಲಿಸು ಮತ್ತಾಯ 10:9-15). [10]"ಪ್ರಯಾಣದಲ್ಲಿ ಸಹಕರಿಸಿದವರನ್ನು ಪೌಲನು 'ಜೊತೆ ಕೆಲಸದವರು' ಎಂದನು (ರೋಮಾಪುರ 16:3, 9; ಫಿಲಿಪ್ಪಿ 2:25; 4:3)" (Mike Bestal, "A Greeting and a Commendation," *Denton Lectures* [1987], 283). ನೋಡಿ ರೋಮಾಪುರ 16:9, 21; ಫಿಲೆಮೋನ 24. ಸುವಾರ್ತೆ ಸಾರುವವರಿಗೆ ಸಹಾಯ ಮಾಡಿ ಅದರ ಫಲವನ್ನು ಅನುಭವಿಸಬಹುದು (ಫಿಲಿಪ್ಪಿ 1:5; 4:10-18). ಸುವಾರ್ತೆ ಸಾರುವವರಿಗೆ ಸಹಾಯಮಾಡುವುದನ್ನು ಪೌಲನು ರೊಮಾಪುರ 10:15ಎ ಒತ್ತಿ ಹೇಳಿರುವನು: "ಸಾರುವವರು ಕಳುಹಿಸಲ್ಪಡದೆ ಸಾರುವುದೆಲ್ಲಿ?"

[11]Based on Bruce, 154. [12]Roberts, 177. [13]ಯೋಹಾನನಿಂದ ಕಳುಹಿಸಲ್ಪಟ್ಟ ಸುವಾರ್ತಾ ಸಾರುವವರಿಗೆ ವಿರೋಧವಾಗಿ ದೆಯೋತ್ರಫ ಇದ್ದಿರಬಹುದು. ಅವರು ಬೋಧಿಸಿದ ಸಿದ್ಧಾಂಥ ಸುಳ್ಳು ಉಪದೇಶಕರ ಸ್ಥಾನದಲ್ಲಿರುವದರಿಂದ ಈ ವಿರೋಧವು ಬಂದಿರಬಹುದು (1 ಯೋಹಾನ 2:18ff.; 4:1 ff.). (Ibid.). [14]ಬೈಬಲ್ ಪದಪ್ರಯೋಗದಲ್ಲಿ "ದೇವರ ಸ್ವತ್ತಿನ ಮೇಲೆ ಹಲವರು ಕರ್ತರಂತೆ ಇರುವದನ್ನು ಪೇತ್ರನು ಕಂಡಿಸಿರಬಹುದು (1 ಪೇತ್ರ 5:3)." (W. Dan Carter, "A Rebuke and a Compliment," *Denton Lectures* [1987], 290). [15]ರೋಗಿಯ ಅಥವಾ ಅಸಾಧರಣ ಪರಿಸ್ಥಿತಿಯನ್ನು "syndrome" ಎಂಬ ಪದವು ಸೂಚಿಸುತ್ತದೆ.